**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಪಾಂಡವಪುರ**

ಸಿ.ಸಿ. ನಂಬ್ರ: **410/2022** ಸಿ.ಡಬ್ಲ್ಯೂ: **1** ಪಿ.ಡಬ್ಲ್ಯೂ: **1**

ಸಾಕ್ಷಿದಾರರ ಹೇಳಿಕೆಗಳು -

ಸಾಕ್ಷಿಯ ಹೆಸರು - ಬಸವರಾಜು
ತಂದೆ ಹೆಸರು - ಲೇಟ್ ಬಸವಯ್ಯ
ವಯಸ್ಸು - 59 ವರ್ಷ
ಉದ್ಯೋಗ - ಪಿಡಿಓ, ದೊಡ್ಡಬ್ಯಾಡರಹಳ್ಳಿ ಗ್ರಾಮ ಪಂಚಾಯತಿ
ವಾಸ ಸ್ಥಳ - ಶ್ರೀರಂಗಪಟ್ಟಣ,

ದಿನಾಂಕ: 21.06.2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ ಮಾನ್ಯ ಎಪಿಪಿಯವರಿಂದ:

ನಾನು ಕಳೆದ ಎರಡುವರೆ ವರ್ಷಗಳಿಂದ ದೊಡ್ಡಬ್ಯಾಡರಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಕುಡಿಯುವ ನೀರಿನ ಟ್ಯಾಂಕನ್ನು ಕಟ್ಟಿಸುವ ಸಲುವಾಗಿ 13 ಲಕ್ಷ ರೂ.ಗಳು ಸರ್ಕಾರದಿಂದ ಮಂಜೂರಾಗಿದ್ದು, ನೀರಿನ ಟ್ಯಾಂಕನ್ನು ಕಟ್ಟುವ ಸಲುವಾಗಿ ದೊಡ್ಡಬ್ಯಾಡರಹಳ್ಳಿ, ನವಗ್ರಾಮ ಎಂಬ ಬಡಾವಣೆಯಲ್ಲಿ ಜಾಗವನ್ನು ನೋಡಿ ಅಳತೆ ಮಾಡಿಸಿ ಕಲ್ಲನ್ನು ಹಾಕಿರುತ್ತೇವೆ. ದೇವರಾಜು ಇತರರು ಸೇರಿ ಕಲ್ಲುಗಳನ್ನು ಕಿತ್ತು ಹಾಕಿ ಕೆಲಸಕ್ಕೆ ಅಡ್ಡಿ ಉಂಟು ಮಾಡಿರುತ್ತಾರೆ, ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಮತ್ತು ನಮ್ಮ ಸಿಬ್ಬಂದಿಗಳು ಪಾಂಡವಪುರ ಪೋಲಿಸ್ ಠಾಣೆಗೆ ದೂರು ನೀಡಲು ಬಂದಾಗ ನಮ್ಮ ಗ್ರಾಮ ಪಂಚಾಯತಿಯ ಮುಂಭಾಗ ಶಾಮಿಯಾನ ಹಾಕಿಕೊಂಡು ಆರೋಪಿತರು ಗಲಾಟೆ

ಮಾಡುತ್ತಿದ್ದರು. ನಂತರ ನಾವು ಪೋಲಿಸರೊಂದಿಗೆ ಪಂಚಾಯತಿ ಬಳಿ ಹೋಗಿ ಪೋಲಿಸರು ಗಲಾಟೆಯನ್ನು ತಡೆದು, ಶಾಮಿಯಾನವನ್ನು ತೆರವುಗೊಳಿಸಿ, ಪಂಚಾಯತಿ ಕಚೇರಿಯ ಗೇಟನ್ನು ತೆಗೆದಿರುತ್ತಾರೆ. ದೇವರಾಜು ಮತ್ತು ಇತರರು ನನ್ನ ವಿರುದ್ಧ ದೂರನ್ನು ನೀಡಿರುತ್ತಾರೆ.

ಸಾಕ್ಷಿಯು ದೂರಿನಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ-1 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನತಂರ ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಇದನ್ನು ಹೊರತುಪಡಿಸಿ ನನಗೇನು ಗೊತ್ತಿಲ್ಲ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 1, 3 ಮತ್ತು 4 ನೇ ಆರೋಪಿತರನ್ನು ನೋಡಿ ಗುರುತಿಸಿದರು. 2 ಮತ್ತು 5 ನೇ ಆರೋಪಿತರು ಗೈರು ಹಾಜರಾಗಿದ್ದು, ಸದರಿ ಆರೋಪಿತರನ್ನು ಗುರುತಿಸುವಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

(ಈ ಹಂತದಲ್ಲಿ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕು ಎಂದು ಮಾನ್ಯ ಸ.ಸ.ಅ. ರವರು ವಿನಂತಿಸಿಕೊಂಡ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

<u>ಪಾಟಿ ಸವಾಲು ಮಾನ್ಯ ಸ ಸ ಅ ರವರಿಂದಃ-</u>

ನಾನು ಕೆಲಸದ ಮೇರೆಗೆ ಹೋಗಿರುವ ಕಾರಣ ದೂರನ್ನು ತಡವಾಗಿ ದಿನಾಂಕ 20.09.2021 ರಂದು ನೀಡಿರುತ್ತೇನೆ.

<u>ಪಾಟಿ ಸವಾಲು ಆರೋಪಿತರ ಪರ ಶ್ರೀ ಡಿ ಆರ್ ಕೆ ವಕೀಲರವರಿಂದಃ-</u>

ಸರ್ವೆ ನಂಬರ 56 ಮತ್ತು 57 ರ ಜಮೀನನ್ನು ನಾನು ಸರ್ವೇಯರ ಮೂಲಕ ಅಳತೆ ಮಾಡಿಸಿರುತ್ತೇನೆ. ಸರ್ವೆ ನಂಬರ 56 ನಮ್ಮ ಗ್ರಾಮ ಪಂಚಾಯತಿಗೆ ಸೇರಿರುವ ಜಮೀನಾಗಿರುತ್ತದೆ. ಸರ್ವೆ ನಂಬರ 56, 1 ನೇ ಆರೋಪಿಯ ತಾಯಿಯ ಮಾಲೀಕತ್ವಕ್ಕೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ 56 ಜಮೀನು ಸರ್ವೆ ನಂಬರ 57 ರ ಜಮೀನಿನ ಪಕ್ಕದಲ್ಲಿರುತ್ತದೆ ಎಂದರೆ ಸರಿ. ಯಾವ ದಿನಾಂಕದಂದು ಸರ್ವೆ ನಂಬರನ್ನು ಅಳತೆ ಮಾಡಿರುತ್ತೇವೆ ಎಂದು ನನಗೆ ಈಗ ನೆನಪಿಲ್ಲ. ನಾವು ಜಮೀನನ್ನು ಅಳತೆ ಮಾಡಿಸುವಾಗ ಬಾಜುದಾರರಿಗೆ ನೋಟಿಸನ್ನು ನೀಡಿರುತ್ತೇವೆ. 2 ನೇ ಆರೋಪಿ ಹಾಗೂ ಮತ್ತಿತರರು ಜಮೀನು ಅಳತೆ ಮಾಡುವಾಗ ತೊಂದರೆ ಮಾಡಿರುತ್ತಾರೆ. ನಾವು ಜಮೀನನ್ನು ಅಳತೆ ಮಾಡಿಸುವಾಗ ಆರೋಪಿತರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

2. ನಾವು ವಾಟರ್ ಟ್ಯಾಂಕ ಕಟ್ಟುವ ಸರ್ವೆ ನಂಬರ ಈಗ ನೆನಪಿಲ್ಲ. ನಾವು ಸರ್ವೆ ನಂಬರ 56 ಅಳತೆ ಮಾಡುವಾಗ ಸರ್ವೆ ನಂಬರ 57 ರ ಜಾಗವನ್ನು ಸೇರಿಸಿ ಅಳತೆ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯ ತಾಯಿ ಅಳತೆ ಮಾಡುವ ಸಮಯದಲ್ಲಿ ನಿಮ್ಮ ಜಮೀನನ್ನು ಮಾತ್ರ ಅಳತೆ ಮಾಡಿ ನಮ್ಮ ಜಮೀನನ್ನು ಅಳತೆ ಮಾಡಬೇಡಿ ಎಂದು ಹೇಳಿದರು ಎಂದರೆ ಸರಿಯಲ್ಲ. ನಾವು ಹದ್ದುಬಸ್ತು ಕಲ್ಲನ್ನು ಹಾಕಿರುವಾಗ ಆರೋಪಿತರು ಸದರಿ ಕಲ್ಲನ್ನು ಕಿತ್ತು ಹಾಕಿರುತ್ತಾರೆ, ಅದರ ಬಗ್ಗೆ ನಾನು ನಮ್ಮ ಅಧಿಕಾರಿಗಳಿಗೆ ದೂರು ನೀಡಿರುತ್ತೇನೆ, ಅದರ ಬಗ್ಗೆ ನಮ್ಮ ಅಧಿಕಾರಿಗಳು ಕ್ರಮ ಕೈಗೊಂಡಿರುವ ಬಗ್ಗೆ ದಾಖಲೆಗಳನ್ನು ನೀಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಕಡತವನ್ನು ನೋಡಿ ನಮ್ಮ ಅಧಿಕಾರಿಗಳು ಕ್ರಮ ಕೈಗೊಂಡ ದಾಖಲೆಗಳು ಇಲ್ಲ ಎಂದು ನುಡಿದರು. ಒಂದು ವೇಳೆ ಆರೋಪಿತರು ಹದ್ದುಬಸ್ತು ಕಲ್ಲನ್ನು ಕಿತ್ತು ಹಾಕಿದ್ದರೆ ಅವರ ವಿರುದ್ಧ ನಮ್ಮ ಮೇಲಿನ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿದ್ದು, ಆದರೆ ಕ್ರಮ ಕೈಗೊಂಡಿರುವ ಯಾವುದೇ ದಾಖಲೆಗಳು ಇಲ್ಲ, ಆದ್ದರಿಂದ ಆರೋಪಿತರು ಯಾವುದೇ ಕಲ್ಲನ್ನು ಕಿತ್ತು ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

3. 5 ನೇ ಆರೋಪಿ ದೊಡ್ಡಬ್ಯಾಡಹರಳ್ಳಿ ಗ್ರಾಮ ಪಂಚಾಯತಿಯ ಸದಸ್ಯೆ ಎಂದರೆ ಸರಿ. 4 ನೇ ಆರೋಪಿಯು 5 ನೇ ಆರೋಪಿಯ ಪತಿ ಎಂದರೆ ಸರಿ. ಬಾಜುದಾರರಿಗೆ ಯಾವುದೆ ನೋಟಿಸನ್ನು ನೀಡದೇ ಸರ್ವೆ ನಂಬರ ಅಳತೆ ಮಾಡಲು ಹೋದಾಗ 5 ನೇ ಆರೋಪಿಯು ಆ ರೀತಿ ಮಾಡುವುದು ಸರಿಯಲ್ಲ ಎಂದು ಹೇಳಿದ ಕಾರಣ ಅವರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಇತರೆ ಗ್ರಾಮ ಪಂಚಾಯತಿ ಸದಸ್ಯರ ಮಾತು ಕೇಳಿಕೊಂಡು ರೈತ ಸಂಘದ ಅಭ್ಯರ್ಥಿಯಾಗಿರುವ 5 ನೇ ಆರೋಪಿಯ ವಿರುದ್ಧ ಹಾಗೂ ಇತರ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

4. ಸರ್ವೆ ನಂಬರ 56 ಜಮೀನಿಗೆ ಸಂಬಂಧಪಟ್ಟಂತೆ ಅ ದಾ ಸಂ 143/2021 ಮತ್ತು 127/2021 ಸಿವಿಲ್ ದಾವೆಗಳು ಇದ್ದು, ಸದರಿ ದಾವೆಗಳಲ್ಲಿ ನಾನು ಪ್ರತಿವಾದಿಯಾಗಿರುತ್ತೇನೆ ಎಂದರೆ ನನಗೆ ಸದರಿ ದಾವೆಗಳ ಬಗ್ಗೆ ಮಾಹಿತಿ ಇಲ್ಲ.

5. 2 ನೇ ಆರೋಪಿ ಮತ್ತು ಇತರರು ಸೇರಿ ಶಾಮಿಯಾನವನ್ನು ಹಾಕಿರುತ್ತಾರೆ. ಆರೋಪಿತರು ಕರ್ತವ್ಯಕ್ಕೆ ಯಾವುದೇ ರೀತಿಯ ಅಡ್ಡಿಯನ್ನುಂಟು ಮಾಡಿರುವುದಿಲ್ಲ, ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

**2** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ,
ನ್ಯಾಯಾಲಯ, ಪಾಂಡವಪುರ